7.	ಮೈಸೂರು	3
8.	ಧಾರವಾಡ	2
9.	ಶಿವಮೊಗ್ಗ	1
	ಒಟ್ಟು	74

ಆ) ರೂ. 4,37,70,088-00

ಇ) ರೂ. 34,60,000-00 ಪರಿಹಾರವನ್ನು 71ಮೃತರ ಕುಟುಂಬಗಳಿಗೆ ಕೊಡಲಾಗಿದೆ.

ಶ್ರೀ ಆರ್.ಎನ್. ನಾಯಕ್ : ಅಧ್ಯಕ್ಷರೇ, ಇಲ್ಲಿ ಕೆಲವು ಮಾಹಿತಿಗಳನ್ನು ಕೇಳುತ್ತೇನೆ. ಎಷ್ಟು ಜನರ ವಿರುದ್ಧ ಈ ಕೋಮುಗಲಭೆ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ? ಆ ಮಾಹಿತಿ ಇದೆಯೇ? ಅಂತಹ ಕೋಮುಗಲಭೆಗಳಲ್ಲಿ ಯಾವುದಾದರೂ ರಾಜಕೀಯ ಪಕ್ಷಗಳ ಜನರಿದ್ದಾರೆಯೇ ಅಥವಾ ರಾಜಕೀಯ ಪಕ್ಷಗಳ ಕೈವಾಡ ಇದೆಯೇ ಎಂದು ಪತ್ತೆಹಚ್ಚಿದ್ದರೆ ತಿಳಿಸಬೇಕು ಮತ್ತು ಈ ಗಲಭೆಗಳಲ್ಲಿ ನೊಂದ ಇನ್ನೂ ಎಷ್ಟು ಜನರಿಗೆ ಪರಿಹಾರ ಕೊಡಬೇಕಾಗಿದೆ ಎಂದು ತಿಳಿಸಬೇಕು.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಮಾನ್ಯ ಸದಸ್ಯರು ಎಷ್ಟು ಸತ್ತಿದ್ದಾರೆಂದಿದ್ದಕ್ಕೆ 74 ಜನ ಸತ್ತಿದ್ದು, 71 ಜನರಿಗೆ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದೇನೆ. ಇನ್ನು ಯಾವ್ಯಾವ ರಾಜಕೀಯ ಪಕ್ಷಗಳು ಎನ್ನುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ, ಅದನ್ನು ಪ್ರತ್ಯೇಕವಾಗಿ ಕೇಳಲಿ, ಪರಿಹಾರ ಕೊಡುವುದರಲ್ಲಿ ಸರ್ಕಾರ ಬಹಳ ಉದಾರತೆಯಿಂದ ಪರಿಹಾರ ಕೊಡಲು ವ್ಯವಸ್ಥೆ ಮಾಡಿದೆ.

ಶ್ರೀ ಆರ್.ಎನ್. ನಾಯಕ್ : ಗಲಭೆಗೊಳಗಾದವರಿಗೆಲ್ಲ ಪರಿಹಾರ ಸಿಕ್ಕಿದೆಯೇ ಅಥವಾ ಇನ್ನೂ ಬಾಕಿ ಇದೆಯೇ? ಒಟ್ಟು ಎಷ್ಟು ಪ್ರಕರಣಗಳು ಗಲಭೆಕೋರರ ವಿರುದ್ಧ ದಾಖಲಾಗಿದೆ ಎಂದು ತಿಳಿಸಬೇಕು?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಈಗಾಗಲೇ ಅಸೆಸ್‌ಮೆಂಟ್ ನಡೆದಿರುವ ವಿವರಗಳನ್ನು ತಮಗೆಲ್ಲ ಕೊಟ್ಟಿದ್ದೇವೆ. ಒಟ್ಟು 4 ಕೋಟಿ 37 ಸಾವಿರ ರೂ. ಪರಿಹಾರ ಕೊಡಬೇಕಾಗಿದೆ. ಅದರಲ್ಲಿ ಈ ತನಕ 34 ಲಕ್ಷದ 60 ಸಾವಿರ ರೂ.ಗಳನ್ನು ಪರಿಹಾರವಾಗಿ ಕೊಡಲಾಗಿದೆ.

ಶ್ರೀ ಆರ್.ಎನ್. ನಾಯಕ್ : ಏನಾದರೂ ಕೇಸ್ ಹಾಕಿದ್ದೀರಾ? ಹಾಕಿದ್ದರೆ ಎಷ್ಟು ಕೇಸ್‌ಗಳು ಪೆಂಡಿಂಗ್‌ನಲ್ಲಿವೆ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಬಹಳಷ್ಟು ಕೇಸ್ ಇವೆ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದರ ವಿವರಗಳನ್ನು ಒದಗಿಸುತ್ತೇನೆ.

ಬೆಂಗಳೂರಿನಲ್ಲಿ ನಡೆದ ದರೋಡೆ ಹಾಗೂ ಡಕಾಯಿತಿಗಳ ಬಗ್ಗೆ

59 - ಶ್ರೀ ರಾಜುಗೌಡ (ಹನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1990-91ನೇ ಸಾಲಿನಲ್ಲಿ ಬೆಂಗಳೂರು ನಗರದ ಹೊರವಲಯದಲ್ಲಿ ಇಲ್ಲಿಯವರೆಗೆ ನಡೆದ ದರೋಡೆ ಹಾಗೂ ಡಕಾಯಿತಿಗಳ ಸಂಖ್ಯೆ ಎಷ್ಟು?

ಆ) ಇದರಲ್ಲಿ ಆದ ಪ್ರಾಣಹಾನಿ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು?

ಇ) ಸದರಿ ಪ್ರಕರಣಗಳಲ್ಲಿ ಕಳುವಾದ ನಗದು ಹಣ ಆಭರಣಗಳು ಹಾಗೂ ಇನ್ನಿತರ ಸೊತ್ತುಗಳೆಷ್ಟು?

ಈ) ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿ ಮೊಕದ್ದಮೆಗಳನ್ನು ಹೂಡಲಾಗಿದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

ಆ) ಡಕಾಯಿತಿ	ದರೋಡೆ	
16	110	
ಇ) ಪ್ರಾಣಹಾನಿ ಇಲ್ಲ	ಪ್ರಾಣಹಾನಿ ಇಲ್ಲ	
11 ಗಾಯಗೊಂಡವರು	44 ಗಾಯಗೊಂಡವರು	
		ರೂ.
ಈ) ರೂ.51,7,471	ನಗದು ಹಣ	5,92,366
	ಆಭರಣ	3,23,200
	ಇತರ ವಸ್ತುಗಳು	1,67,435

ಉ) ಒಂದು 33 ಮೊಕದ್ದಮೆಗಳು ತನಿಖಾ ಹಂತದಲ್ಲಿರುತ್ತವೆ.

ಶ್ರೀ ಜಿ. ರಾಜುಗೌಡ : 90-91ರಲ್ಲಿ ಬೆಂಗಳೂರು ಹೊರಗಡೆ 16 ದರೋಡೆ, 110 ಕಳ್ಳತನ ನಡೆದು ಸುಮಾರು 16 ಲಕ್ಷ ರೂ. ಹಣ ಮತ್ತು ಆಸ್ತಿ ಹಾನಿಯಾಗಿದೆ. ನಮ್ಮ ಪೊಲೀಸರಿಗೆ ಆಧುನಿಕ ಉಪಕರಣ ಕೊಟ್ಟಿದ್ದೀರಿ, ವಾಹನ ಕೊಟ್ಟಿದ್ದೀರಿ, ವಾಕಿಟಾಕಿ ಕೊಟ್ಟಿದ್ದರೂ ಇಷ್ಟೆಲ್ಲ ಕಳ್ಳತನ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣವೇನು? ಜನಸಂಖ್ಯೆಗನುಗುಣವಾಗಿ ಪೊಲೀಸರಿಲ್ಲವೇ? ಅಥವಾ ಪೊಲೀಸರು ತಮ್ಮ ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಿಲ್ಲವೇ? ಈಗಿನ ಪೊಲೀಸ್ ರಾತ್ರಿ ಸಂಚಾರಿ ದಳವನ್ನು ಬಲಪಡಿಸಲು ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ತಿಳಿಸಬೇಕು?

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಪೋಲೀಸ್ ಇಲಾಖೆಯಿಂದ ಎಲ್ಲ ವ್ಯವಸ್ಥೆ ಇದ್ದರೂ ಕೂಡ ಡಕಾಯಿತಿಗಳು ದರೋಡೆಗಳು ಆಗುತ್ತಿರುವುದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ಪ್ರಸ್ತುತ ಪೋಲಿಸರ ಸಂಖ್ಯೆ ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ. ಇದಕ್ಕಾಗಿ ಮಿಗಿಲಾಗಿ ನಿನ್ನೆ ಕೂಡ ಫ್ರಿಕ್ವೆಂಟ್ ಆಗಿ ಎಲ್ಲ ಕಡೆ ಡಕಾಯಿತಿ ಮತ್ತು ರಾಬರಿ ಬಗ್ಗೆ ಆಫೀಸರ್ಸ್ ಜತೆ ಮಾತಾಡಿದ್ದೇನೆ. ಇದೇ 11ನೇ ಮತ್ತು 12ನೇ ಏಪ್ರಿಲ್‌ನಂದು ಹೊಸಪೇಟೆಯಲ್ಲಿ ಅಕ್ಕಪಕ್ಕಗಳ ರಾಜ್ಯಗಳ ಸಿಒಡಿ ಆಫೀಸರ್‌ಗಳ ಕಾನ್‌ಫರೆನ್ಸ್ ಕರೆದಿದ್ದೇವೆ. ಅಲ್ಲಿಗೆ ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಿಂದ ಆಫೀಸರ್ಸ್ ಬರುತ್ತಿದ್ದಾರೆ. ಇದರಿಂದ ಕ್ರಿಮಿನಲ್ಸ್ ಫೋಟೊ ನೋಡಲು ಮತ್ತು ಪರಸ್ಪರ ಸಮಾಲೋಚಿಸಲು ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ಎಫೆಕ್ಟೀವಾಗಿ ಈ ರಾಬರಿಯನ್ನು ತಡೆಗಟ್ಟಲು ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ಸಹ ಸರ್ಕಾರ ಗಮನಕೊಡುತ್ತದೆ.

ಶ್ರೀ ಜಿ. ರಾಜುಗೌಡ : ಪಕ್ಕದ ಮಹಾರಾಷ್ಟ್ರದಲ್ಲಿ ತಲಾ 9 ಸಾವಿರ ಮಂದಿಗೆ ಒಬ್ಬ ಪೋಲಿಸಿದ್ದರೆ ನಮ್ಮಲ್ಲಿ 18 ಸಾವಿರಕ್ಕೆ ಒಬ್ಬ ಪೋಲೀಸ್ ಇದ್ದಾರೆ ನಮ್ಮ ಗೃಹಸಚಿವರು ಉತ್ಸಾಹಿಗಳು ದಕ್ಷರು ಮತ್ತು ಯುವಕರಿರುವುದರಿಂದ ನಮ್ಮ ಜನರು ನಿಮ್ಮಿಂದ ಇನ್ನೂ ಹೆಚ್ಚಿನ ಕೆಲಸ ನಿರೀಕ್ಷೆ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಅಹೋರಾತ್ರಿ ಒಬ್ಬ ಸುಂದರವಾದ ಯುವತಿ ಸಂಚಾರ ಮಾಡುವಂಥ ನಿರ್ಭೀತ ವಾತಾವರಣ ಉಂಟು ಮಾಡಲು ತಮ್ಮ ಕಾರ್ಯ ಪರಿಪಾಲನೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ : ಈಗಾಗಲೇ ತಿಳಿಸಿದಂತೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಎರಡೂವರೆ ಸಾವಿರ ಜನಸಂಖ್ಯೆಗೆ ಒಬ್ಬ ಸಿವಿಲ್ ಪೋಲೀಸ್ ಇದ್ದರೆ, ಮಹಾರಾಷ್ಟ್ರದಲ್ಲಿ 550 ಜನರಿಗೊಬ್ಬನಿದ್ದಾನೆ. ಅದಕ್ಕಾಗಿ ಧರ್ಮವೀರ ಕಮಿಟಿ ರಿಪೋರ್ಟ್ ಏನಿದೆ ಅದರಂತೆ 5 ವರ್ಷಗಳಲ್ಲಿ ಇವರ ಸಂಖ್ಯೆ ಹೆಚ್ಚಿಸಲು ಪ್ರಯತ್ನಿಸುತ್ತೇವೆ. 1 ಸಾವಿರ ಪೋಲಿಸರನ್ನು ಈ ವರ್ಷದಲ್ಲಿ ನೇಮಿಸಿಕೊಳ್ಳುವ ಬಗ್ಗೆ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ.